MINISTER'S TOUR IN BELGAUM

349. SRI B. B. SAYANAK (Belgaum).—

Will the Chief Minister be pleased to state:—

(a) the number of Ministers who toured Belgaum in the month of May 1972 and the date of their tours;

(b) the dates on which more than one Minister was on tour in Belgaum;

(c) when the Chief Minister was in Belgaum apart from the number of other Ministers in Belgaum in the month of May 1972?

SRI H.M. CHANNABASAPPA (Minister for public works [on behalf of SRI D. DEVARAJ URS].—

(a) Seven (7)

1.	Chief Minister	...	15th and 16th
2.	Minister for Municipal Administration	...	23rd
3.	Minister for Agriculture and Forests.	...	18th and 25th
4.	Minister of State for Sericulture	...	7th
5.	Minister of State for Major Irrigation	...	16th and 17th
6.	Minister of State for Youth Services	...	15th to 17th 23rd to 26th
7.	Minister of State for Home	... ...	6th to 10th 21st to 23rd 27th to 29th

(b) 7th, 15th, 16th, 17th, 23rd and 25th.

(c) 15th and 16th.

Before proceeding with Question No. 349, I would like a small mistake to be corrected. In answer to (a) item (7), the dates 6th to 10th and 27th to 29th may be deleted.

SRI B.B. SAYANAK.—When the Chief Minister was in Belgaum on the 16th, the Minister of State for Major Irrigation and the Minister of State for Youth Services and Inspector General of Police were present in Belgaum. What was the propriety for all the Ministers to be in Belgaum on the 16th?

† SRI H.M. CHANNABASAPPA.—There is no specific propriety. It so happens that sometimes tour programme are putup without the knowledge of the other ministers and they come to clash.

Sri B.B. SAYANAK.—When there were more than three Ministers and I.G.P. present in Belgaum, was it not a harassment to the police to make bandhobust arrangement and they could not get their dinner?

SRI H.M. CHANNABASAPPA.—It is not harassment to the police for doing bandhobust. You might at best say it is an additional work.

ಶ್ರೀ ಎಂ. ಎಸ್. ಕೃಷ್ಣನ್.—ಮಹಾರಾಷ್ಟ್ರದವರು ಬೆಳಗಾಮವನ್ನು ತೆಗೆದುಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತಿದ್ದಾರೆ, ಆದ್ದರಿಂದ ಇದನ್ನು ತೆಗೆದುಕೊಳ್ಳುವುದಕ್ಕೆ ಅವರು ಮಾಡುತ್ತಿರುವ ಪಿತೂರಿಯನ್ನು ತಪ್ಪಿಸುವುದಕ್ಕೆ ೭ ಜನ ಮಂತ್ರಿಗಳು ಏಕಕಾಲದಲ್ಲಿ ಬೆಳಗಾವಿಗೆ ಹೋಗಿದ್ದರೇ ಹೇಗೆ ?

ಶ್ರೀ ಎಚ್.ಎಂ. ಚೆನ್ನಬಸಪ್ಪ.—ಅಂಥಾದ್ದು ಏನೂ ಇಲ್ಲ. ಇಬ್ಬರೂ ಮಂತ್ರಿಗಳು ಬೇರೆ ಕೆಲಸಕ್ಕೆ ಬೇರೆ ಕಡೆ ಹೋಗುವಾಗ ಬೆಳಗಾಮ್ ಮೂಲಕವೇ ಹೋಗಬೇಕು. ಆದ್ದರಿಂದ ಅವರ ಹೆಸರೂ ಕೂಡ ಅದರಲ್ಲಿ ಸೇರಿಕೊಂಡಿದೆ.

ಶ್ರೀ ಕೋಣಂದೂರು ಲಿಂಗಪ್ಪ.—೭ ಜನ ಮಂತ್ರಿಗಳೂ ಒಂದು ಕಡೆ ಏಕಕಾಲದಲ್ಲಿ ಭೇಟಿ ಕೊಟ್ಟು ಟಿ.ಎ. ಗಿಟ್ಟಿಸುವ ಪ್ರಯತ್ನ ಮಾಡುತ್ತಾರೆಯೇ ?

ಶ್ರೀ ಎಚ್.ಎಂ. ಚೆನ್ನಬಸಪ್ಪ.—ಅದು ಟಿ.ಎ. ಗಿಟ್ಟುಸುವ ಪ್ರಯತ್ನ ಅಲ್ಲ. ರಾಜ್ಯದ ಕೆಲಸವನ್ನು ಮಾಡುವುದಕ್ಕೆ ಪ್ರವಾಸ ಮಾಡತಕ್ಕ ಕಾಲದಲ್ಲಿ ಇಬ್ಬರು ಮಂತ್ರಿಗಳೂ ಅಲ್ಲಿಗೆ ಹೋದ ಕಾಲದಲ್ಲಿ ಒಂದೇ ಕಡೆ ಕ್ಯಾಂಪ್ ಮಾಡಬೇಕಾದ ಸಂದರ್ಭ ಬರುತ್ತದೆ. ಒಂದೊಂದು ವೇಳೆ ಬೇರೆ ಮಂತ್ರಿಗಳು ಅದೇ ಸ್ಥಳಕ್ಕೆ ಪ್ರವಾಸ ಹೋಗಲು ಪ್ರೋಗ್ರಾಮ್ ಹಾಕಿಕೊಂಡಿರುವುದರ ಅರಿವು ಬೇರೆ ಮಂತ್ರಿಗಳಿಗೆ ಇಲ್ಲದೆ ಇರುವ ಸಂದರ್ಭವೂ ಇರುತ್ತದೆ.

ಶ್ರೀ ಎಸ್.ಎಂ. ಶೀರನಾಳಿ ಚಂದ್ರಶೇಖರ.—ಮಂತ್ರಿಗಳು ಪ್ರವಾಸ ಮಾಡತಕ್ಕ ಕಾಲದಲ್ಲಿ ಆಯಾ ತಾಲ್ಲೂಕಿನ ಸಂಬಂಧಪಟ್ಟ ಎಂ.ಎಲ್.ಎ. ಗಳಿಗೆ ಟೂರ್ ಪ್ರೋಗ್ರಾಮ್ ಕಾಪಿಯನ್ನು ಕಳುಹಿಸಬೇಕೆಂದು ನಿಯಮ ಇದೆ. ಆದರೆ ಆ ಟೂರ್ ಪ್ರೋಗ್ರಾಮ್ ಕಾಪಿಯು ಮಂತ್ರಿಗಳು ಆ ಸ್ಥಳಕ್ಕೆ ಬರುವ ದಿವಸ ಬರುತ್ತದೆ. ಇದಕ್ಕೆ ಕಾರಣವೇನು ?

ಶ್ರೀ ಎಚ್.ಎಂ. ಚೆನ್ನಬಸಪ್ಪ.—ಜರೂರು ಕಾರ್ಯಕ್ರಮದ ನಿಮಿತ್ತ ಪ್ರವಾಸವನ್ನು ಕೈಗೊಂಡಾಗ ಅವರು ಪ್ರವಾಸ ಬರುವ ದಿವಸ ಟೂರ್ ಪ್ರೋಗ್ರಾಮ್ ಬರುತ್ತದೆ. ಬೇರೆ ಎಲ್ಲಾ ಕಾಲದಲ್ಲಿಯೂ ಸಂಬಂಧಪಟ್ಟ ಆಯಾಯ ತಾಲ್ಲೂಕಿನ ಎಂ.ಎಲ್.ಎ. ಮತ್ತು ಎಂ.ಎಲ್.ಸಿ. ಗಳಿಗೆ ಟೂರ್ ಪ್ರೋಗ್ರಾಮ್ ಪೂರ್ವಭಾವಿಯಾಗಿ ಹೋಗಬೇಕು ಎಂದು ಸರ್ಕಾರದ ಇಚ್ಛೆ ಇದೆ.

ಶ್ರೀ ಬಿ.ವಿ. ಕಕ್ಕಿಲಾಯ.—ಯುವಜನ ಕಲ್ಯಾಣ ಮಂತ್ರಿಗಳು ಒಂದು ತಿಂಗಳಿನಲ್ಲಿ ಬೆಳಗಾಮಿಗೆ ಎರಡು ಸಲ ಹೋಗಿದ್ದಾರೆ. ಭಾರಿ ನೀರಾವರಿ ರಾಜ್ಯ ಮಂತ್ರಿಗಳು ೬೬ ಮತ್ತು ೧೭ನೇ ತಾರೀಖಿನ ದಿವಸ ಅಲ್ಲಿಗೆ ಪ್ರವಾಸ ಹೋಗಿ ಕ್ಯಾಂಪ್ ಮಾಡಿದ್ದಾರೆ. ಅವರು ಅಲ್ಲಿಗೆ ಅಷ್ಟು ಸಾರಿ ಪ್ರವಾಸ ಹೋಗಿ ನಿಲ್ಲಬೇಕಾದ ಕಾರಣಗಳೇನು ಎಂಬುದನ್ನು ಹೇಳುತ್ತೀರಾ?

SRI H.M. CHANNABASAPPA.—On the 15th and 16th the Minister of State for Youth Services participated in the Chief Minister's function. On the 16th the Minister of State for Major Irrigation inspected Hidkal Dam and other irrigation projects in Belgaum and stayed in the Ghataprabha T.B. and had discussions with the public and ryots regarding the irrigation projects in the District.

ಶ್ರೀ ಕೆ.ಎನ್. ವೀರಪ್ಪಗೌಡ.—ಈಗ ಮಾನ್ಯ ಮಂತ್ರಿಗಳು ಹೇಳಿದರು, ಯಾರಾದರೂ ಮಂತ್ರಿಗಳು ಪ್ರವಾಸ ಹೋಗಬೇಕಾದರೆ ಸರ್ಕಾರದ ಕೆಲಸಕ್ಕೋಸ್ಕರ ಪ್ರವಾಸ ಹೋದರು. ಟಿ.ಎ. ಡಿ.ಎ., ತೆಗೆದು ಕೊಳ್ಳುವ ಉದ್ದೇಶದಿಂದ ಅವರು ಪ್ರವಾಸ ಹೋಗಲಿಲ್ಲ ಎಂದು. ಇಂತಿಂಥಾ ಸರ್ಕಾರಿ ಕೆಲಸಕ್ಕೋಸ್ಕರ, ಅಥವಾ ಆಫೀಸುಗಳನ್ನು ಇನ್‌ಸ್ಪೆಕ್ಷನ್ ಮಾಡುವ ಬಗ್ಗೆ ಮಂತ್ರಿಗಳು ಪ್ರವಾಸ ಹೋಗುತ್ತಾರೆ ಎಂದು ಟೂರ್ ಪ್ರೋಗ್ರಾಮ್ ಇಷ್ಯೂ ಮಾಡುತ್ತಾರೆ. ಹೋಗುತ್ತಾರೆ. ಕೆಲವು ಸಂದರ್ಭಗಳಲ್ಲಿ ಒಂದೇ ತಾಲ್ಲೂಕಿಗೆ ೧೦ ಸಾರಿ ಪ್ರವಾಸ ಹೋಗುತ್ತಿರ್ತಾರೆ. ಇದು ತಮ್ಮ ಗಮನಕ್ಕೆ ಬಂದಿದೆಯೇ?

ಶ್ರೀ ಎಚ್.ಎಂ. ಚನ್ನಬಸಪ್ಪ.—ಸಾಮಾನ್ಯವಾಗಿ ಯಾರಾದರೂ ಬಂದು ಪ್ರವಾಸ ಬನ್ನಿ ಎಂದು ಮಂತ್ರಿಗಳನ್ನು ಕರೆದರೆ ಆಗ ಅವರು ಹೋಗಬೇಕಾದ ನಿಯಮವಿಲ್ಲ. ಸಾಮಾನ್ಯವಾಗಿ ಸಣ್ಣ ಸಣ್ಣ ಕಾರ್ಯ ಕ್ರಮಗಳಿಗೆ ಹೋಗುವುದಿಲ್ಲ. ಯಾವುದಾದರೂ ಮುಖ್ಯವಾದ ಸಮಾರಂಭಗಳು ಬಂದಾಗ ಅಂಥ ಕಾರ್ಯಕ್ರಮಗಳಿಗೆ ಮಂತ್ರಿಗಳು ಒಪ್ಪಿಕೊಳ್ಳಬೇಕಾಗುತ್ತದೆ. ಸಾರ್ವಜನಿಕ ಸಮಾರಂಭಗಳಲ್ಲಿ ಸರ್ಕಾರದ ಕೆಲವು ಉದ್ದೇಶಗಳನ್ನು, ನೀತಿ ನಿಯಮಗಳನ್ನು ಸಾರ್ವಜನಿಕರಿಗೆ ಭಾಷಣದ ಮುಖಾಂತರ ತಿಳಿಸುವ ಅವಶ್ಯಕತೆ ಕೂಡ ಇರುತ್ತದೆ. ಈ ದೃಷ್ಟಿಯಿಂದ ಮಂತ್ರಿಗಳು ಪ್ರವಾಸ ಹೋಗಬೇಕಾಗುತ್ತದೆ.

ಶ್ರೀ ಕೋಣಂದೂರು ಲಿಂಗಪ್ಪ.—ಕೆಲವರು ಮಂತ್ರಿಗಳು ಸಾಧಾರಣವಾಗಿ ಆಗಾಗಲೂ ಪ್ರವಾಸ ದಲ್ಲಿಯೇ ಇರುತ್ತಾರೆ. ಅಂಥಾ ಮಂತ್ರಿಗಳ ಬಗ್ಗೆ ಸ್ವಲ್ಪ ಹಿಡಿತವನ್ನು ಇಟ್ಟುಕೊಳ್ಳುತ್ತೀರಾ ಈ ರೀತಿ ಯಾದ ಪ್ರವಾಸದಿಂದ ರಾಜ್ಯದ ಬೊಕ್ಕಸಕ್ಕೆ ಹೆಚ್ಚು ಹೊರೆಯಾಗದಂತೆ ಮಿತವ್ಯಯ ದೃಷ್ಟಿಯಿಂದ ಇದನ್ನು ಕಡಿಮೆ ಮಾಡುವುದಕ್ಕೆ ಪ್ರಯತ್ನ ಮಾಡುತ್ತೀರಾ?

ಶ್ರೀ ಎಚ್.ಎಂ. ಚನ್ನಬಸಪ್ಪ.—ಅಂಥಾದ್ದು ಯಾವುದಾದರೂ ಕಂಡು ಬಂದರೆ ಅದನ್ನು ಖಂಡಿತ ವಿಚಾರ ಮಾಡತ್ತೇನೆ.

ಶ್ರೀ ಎಂ ಬಿ. ರಾಮಸ್ವಾಮಿ.—ಮಂತ್ರಿಗಳು ಪ್ರವಾಸ ಮಾಡುವಾಗ ಒಂದು ತಿಂಗಳಲ್ಲಿ ಇಷ್ಟು ಕಡೆ ಮಾತ್ರ ಪ್ರವಾಸ ಮಾಡಬೇಕೆಂದೇನಾದರೂ ನಿಗದಿ ಮಾಡಲಾಗಿದೆಯೇ?

ಶ್ರೀ ಎಚ್.ಎಂ. ಚನ್ನಬಸಪ್ಪ.—ಸರ್ವೇ ಸಾಧಾರಣವಾಗಿ ಒಂದು ತಿಂಗಳಿನಲ್ಲಿ ೧೦ ದಿವಸಗಳಿಗೆ ಮೀರದಂತೆ ಪ್ರವಾಸ ನಿಯಮ ಇದೆ. ವಿಶೇಷ ಸಂದರ್ಭದಲ್ಲಿ, ಜರೂರು ಅವಶ್ಯಕತೆ ಇದ್ದರೆ, ಹೆಚ್ಚು ಪ್ರವಾಸ ಮಾಡಬಹುದು.

RISE IN THE PRICES OF RAW SILK

426. SRI K. M. NAGANNA (Chickpet):—

Will the Minister of State for Sericulture be pleased to state :—

(*a*) whether it has come to the notice of the Government that price of raw silk is going up abnormally in recent month ;

(*b*) whether it has come to the notice of the Government that on account of the high cost of raw silk, the weavers are finding it difficult to carry on their normal profession and experiencing great hardship;

(*c*) the steps taken by the Government to prevent the rise in price of raw silk ?

SRI S. B. NAGARAL (Minister of State for Sericulture) :—

(*a*) Yes.

(*b*) Yes. It is a temporary phase.

(*c*) Steps are being taken to set up a Raw Material Bank to fix a floor and ceiling price for Raw Silk.

ಶ್ರೀ ಕೆ. ಎಂ. ನಾಗಣ್ಣ .—(ಬಿ) ಪ್ರಶ್ನೆಗೆ ''ಬಂದಿದೆ'' ಎಂದು ಹೇಳಿದ್ದೀರಿ. ಅಂದರೆ ಬೆಲೆ ಜಾಸ್ತಿಯಾಗಿದೆ ಎಂದು ಒಪ್ಪಿಕೊಂಡಿದ್ದೀರಿ. ಈಗ ಸುಮಾರು ಒಂದು ವರ್ಷದಿಂದ ಬೆಲೆ ಬಹಳ ಜಾಸ್ತಿ ಯಾಗಿದೆ. ತಾವು ತಾತ್ಕಾಲಿಕ ಪರಿಸ್ಥಿತಿ ಉಂಟಾಗಿದೆ ಎಂದು ಹೇಳಿದ್ದೀರಿ. ಅದು ನನಗೆ ಅರ್ಥವಾಗುತ್ತಿಲ್ಲ.